K.S.R.T.C. Bus Depot in Bidar

674 SRI BAPU RAO HULSURKAR (Basavakalyana).— Will the Minister for Transport and Minor Irrigation be pleased to state :

(*a*) whether it is a fact that a land has been acquired for establishing K.S.R.T.C. Bus Depot in Bidar;

(*b*) if so when it was acquired and when the possession of land was taken;

(*c*) The reasons for delay in establishing a bus depot ?

SRI M. M. J. SADYOJATHA (Minister for Transport and Minor irrigation).—

(*a*) Yes.

(*b*) Land was acquired and taken possession on 21-2-1979.

(*c*) Bidar District is in the non-monopoly sector and the routes have not been nationalised. It is therefore felt that instead of a bus depot, a traffic depot at Bidar would be sufficient.

ಶ್ರೀ ಪಿ. ರಾಮ್‌ದೇವ್.— ಸ್ವಾಮಿ, ತಮ್ಮ ಗಮನಕ್ಕೆ ಒಂದು ಗಂಭೀರವಾದ ವಿಚಾರವನ್ನು ತರ ಬೇಕಾಗಿದೆ.

ಅಧ್ಯಕ್ಷರು.— ಮೊದಲು ಅದಕ್ಕೆ ನೋಟೀಸ್ ಕಳುಹಿಸಿ. ಹಾಗೆಯೇ ಅದನ್ನು ಪ್ರಸ್ತಾಪ ಮಾಡಿ ದರೆ ಏನೂ ಪ್ರಯೋಜನವಾಗುವುದಿಲ್ಲ. ಆ ವಿಷಯ ಏನು ಅನ್ನುವುದನ್ನು ನೋಡುತ್ತೇನೆ.

ಶ್ರೀ ಪಂಪಾಪತಿ.— ಸ್ವಾಮಿ, ಹರಿಜನರಿಗೆ ಸಂಬಂಧಪಟ್ಟಂತೆ ಒಂದು ನೋಟೀಸನ್ನು ತಮಗೆ ಕೊಟ್ಟಿದೆ. ಅದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.— ನಾನು ಅದನ್ನು ನೋಡುತ್ತೇನೆ. ಆ ಬಗ್ಗೆ ತಾವು ಸಹ ನನ್ನನ್ನು ಬಂದು ನೋಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಅಡ್ಮಿನಿಸ್ಟ್ರೇಟರ್ ಜನರಲ್ ಜಾಗ ಕಳೆದ ಮಾರ್ಚ್ ತಿಂಗಳಿಂದ ಖಾಲಿ ಇದೆ. ಇದರಿಂದ ೧೫ ಸಾವಿರ ರೂಪಾಯಿಗಳಿಗೆ ಒಳಪಟ್ಟು ಇರತಕ್ಕಂಥ ಮೊಬಲಗಿಗೆ ಸಕ್ಸೇಷನ್ ಸರ್ಟಿಫಿಕೇಟ್ ಕೊಡತಕ್ಕಂಥ ವಿಚಾರದಲ್ಲಿ ೫೦೦ ಅರ್ಜಿಗಳು ನಿಂತು ಹೋಗಿವೆ. ಆದಕಾರಣ ಈ ಜಾಗಕ್ಕೆ ಯಾರನ್ನಾದರೂ ಕೂಡಲೇ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.— ಈಗಾಗಲೇ ನೇಮಕವಾಗಿರಬೇಕೆಂದು ಕಾಣುತ್ತದೆ. Any way I will look into it.

SRI A. LASHMISAGAR.— If it as been done I do not want to raise it again.

CALLING ATTENTION TO A MATTER OF URGENT PUBLIC IMPORTANCE.

re. Assault on Chandraiah Setty s/o Annaiah of Rudrapatna on 21-5-1980 and inaction of the police in tracing the culprits.

SIR K. B. MALLAPPA.—Sir, I call the attention of the Chief Minister to the assault on Chandraih Setty s/o Annaiah of Rudrapatna on 21-5-1980 and inaction of the police on tracing the culprits.

SRI R. GUNDU RAO (Chief Minister) Sir, I wish to make the following;

On 22-5-1980 at 6-45 A M. HC 29 who was the Station House Officer of Hassan City Police Station received information from one H. J. Sannappa s/o Thimmegowda, 45 years, Hassan City to the effect that at 6-30 A. M. when he was returning to his house, he observed that one Rangegowda s/o Thimmegowda of Bettenally and others were found removing one injured person from the Railway Track under the Railway Bridge near Bittenally who had lost his left hand near the joint and when questioned, he stated his name as Ramachandra, *etc.*

On receipt of this information, HC 29 incorporated the facts in the S. H. D. in C. Mis. No. 104/80 and left the Police Station immediately after sending information to the PSI. The H. C. got shifted the injured to the S. C. Hospital in the Police Control Room Van for necessary treatment. The PSI immediately after receiving the information came to the Police Station and rushed to the Hospital and recorded the statement of the injured who was being treated.

The brief facts of the statement as narrated by the injured are as follows.

"He is a student of P. U. C. and T. C. H. and son of Annaiah Setty of Rudrapatna, Arkalgund Taluk. He is residing in a room belonging to one Sheshadri Iyengar, K. R. Puram, Hassan City. On 21-5-1980, he had been to witness Ist Show Cinema in "Picture Palace Theatre, purchasing a ticket by paying Rs. 2-50. When he was witnessing the picture, he had kept his leg on the front seat and four members who were sitting in front of him, took objection for the same and created some galata. After the Film Show was over, they became friends and they went to Bus stand Sujatha Hotel and took Coffee. He became unconscious. When he regained his consciousness, it was morning and he was lying on the Railway Tract below the Railway bridge near Betkenahally and his left hand was cut. Later some vegetable selling people who were going on that road, removed him from the Railway track and laid him by the side of the Track. Later, the Police brought him to the S. C. Hospital and he will indentify those four persons, *etc*".

On recording the statement of Sri R. A, Ramachandra (injured), PSI returned to the Police Station and registered a case in Hassan City P. S. Cr, No. 151/80 u/s 307 IPC. He then deputed his Crime staff to collect information in the above case and to round up the bad characters of the City to get some clue. In the meantime, he secured

M. Sarvothama Rao who is the Proprietor of Bus Stand Sujatha Hotel and examined him, which revealed that the working hours of the Hotel is from 6 A. M. to 8-30 or 9 P. M. and hence the statement of the injured to the effect that he took Coffee in the said Hotel after the closure of Ist Show is false. The Crime duty staff reported that no person by name Ramachandra was residing in the lodge of Sheshadri Iyengar at K. R, Puram, Hassan City.

The PSI drew up a Mahazar at the spot where the injured was lying. During the course of the mahazar blood-stains were found on tne Railway track *i. e.* on the rails as well as on the wooden plank where the injured was first lying. During the course of investigation, the PSI examined H. T. Sannappa and Rangegowda who saw the injured first. The separated hand which was taken from the spot to the Hospital along with the injured was returned to the Police by the Doctor and it was in turn, handed-over to Sri R. Nagaraja Setty, brother of the injured for further necessary action.

During the course of investigation, it is disclosed that the injured's cut portion of the left hand was having black oilly type marks and on his clothes, there were black oilly type marks and small cnarcoal pieces were also found. The above facts clearly disclosed to be a Railway accident.

During the course of seizure of the clothes of the injured in the Emergency Ward at S. C. Hospital, one slip was noticed in his pocket of his underwear which is found to be a suicidal Note dated 20-5-1980.

The wordings of the suicidal Note of Shri A. R. Ramachandra is as follows.

"ಪೋಲೀಸ್ ಅಧಿಕಾರಿಗಳಿಗೆ ತಿಳಿಸುವುದೇನೆಂದರೆ ನಾನು ಸತ್ತ ನಂತರ ನನ್ನ ಶರೀರ ನಿಮ್ಮ ಕೈ ಸೇರಿದರೆ ನೀವು ಯಾವ ಕಾರಣದಿಂದಲೂ ನನ್ನ ರೂಮಿನ ಜನರಿಗಾಗಲಿ ಅಥವಾ ನನ್ನ ಮನೆಯ ಯಾರಿಗಾಗಲೀ ಯಾವ ತೊಂದರೆಯನ್ನು ಕೊಡಕೂಡದು ಕಾರಣ ನಾನು ನನ್ನ ಜೀವನದಲ್ಲಿ ಬೇಸರಪಟ್ಟು ಈ ಕೆಲಸ ಮಾಡಿಕೊಂಡಿದ್ದೇನೆ."

The injured has admitted that it is his own handwriting. The clothes and the suicidal Note were seized under Mahazar.

On 23-5-1980, the case records and the Properties were handed-over to the HC 66, Railway Police Out-Post, Hassan for further investigation on the point of jurisdiction after intimating the same to the PSI and PI Railway Police Station, Mysore. The name of the injured is not Chandraiah Setty as mentioned in the Calling Attention Notice No. 378 but his name is Shri R. A. Ramachandra.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ, ಈ ಸ್ಟೇಟ್‌ಮೆಂಟಿನಲ್ಲಿ ಕೊಟ್ಟಿರತಕ್ಕಂಥ ವಿವರಗಳನ್ನು ನೋಡಿದರೆ ಇದರಲ್ಲಿ ಏನೋ ನಡೆದಿದೆ ಎಂದು ನನಗೆ ಕಾಣುತ್ತಿದೆ. ಎಕೆಂದರೆ, ಈ ಸ್ಟೇಟ್‌ಮೆಂಟ್ ಇಲ್ಲಿ ಮಾಡಬೇಕಾದರೆ ಬಹಳಷ್ಟು ದಿವಸ ತಡವಾಯಿತು. ಮತ್ತೆ ಈ ಒಂದು ಸ್ಟೇಟ್‌ಮೆಂಟ್ ಅಲ್ಲಿಂದ ಬರಬೇಕಾದರೆ ಬಹಳ ಕಾಲ ತೆಗೆದುಕೊಂಡಿದೆ.

ಅಧ್ಯಕ್ಷರು.—ಬಹಳ ಕಾಲ ಎಂದರೆ ತಾವು ನೋಟೀಸ್ ಕೊಟ್ಟು ಎಷ್ಟು ದಿವಸಗಳಾಯಿತು ?

ಶ್ರೀ ಕೆ. ಬಿ. ಮಲ್ಲಪ್ಪ.—೧೫ ದಿವಸಗಳಾಯಿತು.

ಅಧ್ಯಕ್ಷರು.—ಇಲ್ಲಿಂದ ಎರಡು ಟೆಲಿಗ್ರಾಂಗಳನ್ನು ಕಳುಹಿಸಿ ಉತ್ತರ ತರಿಸಲಾಗಿದೆ.

ಶ್ರೀ ಕೆ. ಬಿ. ಮಲ್ಲಪ್ಪ.—ಈ ಹುಡುಗನ ತಂದೆ ನನಗೆ ಒಂದು ಕಾಗದ ಬರೆದಿದ್ದಾರೆ. ಅದರಲ್ಲಿ ಅವರು ಏನು ಹೇಳಿದಾರೆಂದರೆ, ಈ ವಿದ್ಯಾರ್ಥಿ ಟಿ.ಸಿ ಹೆಚ್ ನಲ್ಲಿ ವ್ಯಾಸಾಂಗ ಮಾಡುತ್ತಿದ್ದ. ಆತನ ಕೆಲವು ಸ್ನೇಹಿತರು ಸೇರಿಕೊಂಡು ಈತನನ್ನು ಕೊಲ್ಲಬೇಕೆಂದುಕೊಂಡು ತೀರ್ಮಾನ ಮಾಡಿ, ಆತನನ್ನು ಕರೆದುಕೊಂಡು ಹೋಗಿ ಆತನ ಕೈ ಕತ್ತರಿಸಿ ನಂತರ ರೈಲ್ವೇ ಕಂಬಿಯ ಮೇಲೆ ಹಾಕಿದರು ಎಂದು. ಮತ್ತು ಅವರ ಬರೆದಿರುವ ಪತ್ರದಲ್ಲಿ ಕೆಲವರ ಹೆಸರನ್ನು ಸಹ ತಿಳಿಸಿದ್ದಾರೆ. ಕೆ. ಪಾರ್ವತಿ, ಜಯ, ವಿಜಯ, ಹಾಗೂ ರಾಜಾಚಾರಿ ಎಂಬುವರು ಸೇರಿಕೊಂಡು ತಮ್ಮ ಮಗನನ್ನು ಅಸಾಲ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದಕಾರಣ ಇವರುಗಳನ್ನು ಹಿಡಿದು ವಿಚಾರಣೆ ನಡೆಸಬೇಕೆಂದು ಪತ್ರದಲ್ಲಿ ಕೇಳಿದ್ದಾರೆ. ಆದರೆ ಈ ಸ್ಟೇಟ್‌ಮೆಂಟಿನಲ್ಲಿ ಈ ಯಾವ ವಿಚಾರಗಳೂ ಸಹ ಬಂದಿಲ್ಲ. ಇಲ್ಲಿ ಹೆಸರಿನ ಬಗ್ಗೆ ಸ್ವಲ್ಪ ವ್ಯತ್ಯಾಸವಿರಬಹುದು. ಆದರೆ ಈತ ಅಣ್ಣಯ್ಯಶೆಟ್ಟಿಯ ಮಗನೇ ಆಗಿದ್ದಾನೆ. ಸ್ಟೇಟ್‌ಮೆಂಟ್ ಕೊಡುವಾಗ ಚಂದ್ರಯ್ಯಶೆಟ್ಟಿ ಎಂದು ಹೇಳಿರಬಹುದು. ಆದರೆ ಇಲ್ಲಿ ಈ ಕೇಸನ್ನು ಮುಚ್ಚಿಹಾಕಲು ಪೋಲೀಸಿನವರು ಪ್ರಯತ್ನ ಮಾಡಿರುವಂತೆ ಕಾಣುತ್ತಿದೆ. ನಿಜವಾಗಿಯೂ ಇದು ನ್ಯಾಯವಾದ ಪೋಲೀಸರ ಸ್ಟೇಟ್‌ಮೆಂಟ್ ಅಲ್ಲ. ಇದು ಕುಹಕದಿಂದ ಕೂಡಿದೆ. ಹಾಸನ ಜಿಲ್ಲೆಯಲ್ಲಿರುವ ಪೋಲೀಸ್ ಇಲಾಖೆ ಹಾಗೂ ಪೋಲೀಸ್ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದ ಕಾರಣ, ಅಲ್ಲಿ ಯಾವ ಗೂಂಡಾಗಳೂ ಹಾಗೂ ದರೋಡೆಗಾರರು ಇವರಿಗೆ ಹೆದರುತ್ತಿಲ್ಲ. ಮಾನ್ಯ ದೇವೇಗೌಡರು ಕಳೆದ ಅಧಿವೇಶನದಲ್ಲಿ ಅಲ್ಲಿನ ಪೋಲೀಸ್ ಅಧಿಕಾರಿಗಳ ಬಗ್ಗೆ ಹಾಗೂ ಅವರ ಕಾರ್ಯಾಚರಣೆಯ ಬಗ್ಗೆ ಬಹಳ ವಿಷದವಾಗಿ ಮಾತನಾಡಿದ್ದಾರೆ. ಆದಕಾರಣ ನಾನು ಹೆಚ್ಚು ಮಾತನಾಡಲು ಹೋಗುವುದಿಲ್ಲ.

ಅಧ್ಯಕ್ಷರು.—ತಾವು ಏನಿದ್ದರೂ ವಿವರಣೆ ಕೇಳಬೇಕೇ ಹೊರತು ವಿವರವಾಗಿ ಪ್ರಸ್ತಾಪ ಮಾಡುವುದಕ್ಕೆ ನಿಯಮದ ಪ್ರಕಾರ ಅವಕಾಶವಿಲ್ಲ. ಚಂದ್ರಶೆಟ್ಟಿ ನಮ್ಮ ರೂಮಿನಲ್ಲಿ ವಾಸವಾಗಿದ್ದನು ಎಂದು ಶ್ರೀ ಶೇಷಾದ್ರಿ ಐಯಂಗಾರ್ ಹೇಳಿರಬಹುದು. ಇವರು ಅವನು ಅಲ್ಲಿ ವಾಸವಾಗಿಲ್ಲ ಎಂದು ಹೇಳಿದ್ದಾರೆ, ಅವನ ದೇಹ ರೈಲ್ವೆ ಟ್ರಾಕ್ ಮೇಲೆ ಬಿದ್ದಿದ್ದಂಥ ಸಮಯದಲ್ಲಿ ಅದು ರೈಲ್ವೆ ಪೋಲೀಸ್‌ನವರ ಜ್ಯುರಿಸ್ಡಿಕ್ಷನ್‌ಗೆ ಬರುವುದಿಲ್ಲ. ಆದರೆ ಅವನ ದೇಹವನ್ನು ರೈಲ್ವೇ ಪೋಲೀಸ್‌ಗೆ ಕಳಿಸಿಕೊಟ್ಟಿದ್ದೇವೆ ಎಂದು ರಿಪೋರ್ಟ್‌ನಲ್ಲಿ ಇದೆ. ಯಾರು ಈ ಬಗ್ಗೆ ಏನೇ ವಿಚಾರ ಮಾಡಲಿ ಚಂದ್ರಶೆಟ್ಟಿಯ ಕೈಕಾಲನ್ನು ಕತ್ತರಿಸಿರುವುದು ನಿಜ. ಈ ವಿಚಾರದಲ್ಲಿ ಅಪರಾಧಿಗಳನ್ನು ಹಿಡಿಯುವುದರಲ್ಲಿ ಪೋಲೀಸರು ಡಿಲೆ ಮಾಡಿದ್ದಾರೆ ಮತ್ತು ಅಪರಾಧಿಗಳನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲವಾದ್ದರಿಂದ ಇದು ಆತ್ಮಹತ್ಯೆಯೆಂದು ವರದಿ ಮಾಡಿದ್ದಾರೆ, ಇದು ಸುಳ್ಳು.

ಅಧ್ಯಕ್ಷರು.—ನಿಮಗೆ ಏನೇನು ಅನುಮಾನ ಇದೆ ಅದರ ಬಗ್ಗೆ ವಿವರಣೆ ಕೇಳಿ. ಇದಕ್ಕಾಗಿ ಹೆಚ್ಚು ಸಮಯವನ್ನು ತೆಗೆದುಕೊಳ್ಳಬೇಡಿ.

ಶ್ರೀ ಕೆ. ಬಿ. ಮಲ್ಲಪ್ಪ.—ಸ್ವಾಮಿ. ಈ ಬಗ್ಗೆ ಇರತಕ್ಕಂಥ ವಾಸ್ತವಾಂಶಗಳನ್ನು ಹೇಳುವುದಕ್ಕೆ ನನಗೆ ಟೈಮ್ ಕೊಡಬೇಕು. ಅವನಿಗೆ ಆತ್ಮಹತ್ಯೆ ಮಾಡಿಕೊಳ್ಳತಕಂಥ ಮನಸ್ಸು ಇದ್ದಿದ್ದರೆ ಅವನೇ ರೈಲು ಕಂಬಿಯ ಮೇಲೆ ಮಲಗಿಕೊಳ್ಳಬಹುದಾಗಿತ್ತು. ಆದರೆ ಅವನು ಹಾಗೆ ಮಾಡಿಲ್ಲ. ಅಪರಾಧಿಗಳು ಅವನ ಕೈಕಾಲುಗಳ ಜಾಯಿಂಟ್ ಹತ್ತಿರ ಕತ್ತರಿಸಿದ್ದಾರೆ, ಒಂದು ವೇಳೆ ಅವನು ರೈಲು ಕಂಬಿಯ ಮೇಲೆ ಮಲಗಿಕೊಂಡಿದ್ದರೆ ರೈಲು ಹೇಗೆ ಅವನ ಕೈಕಾಲುಗಳ ಜಾಯಿಂಟ್ ಹತ್ತಿರ ಕತ್ತರಿಸಿಕೊಂಡು ಹೋಗುತ್ತವೆ? ಇಲ್ಲಿ ನಮಗೆ ಅನುಮಾನ ಬರುತ್ತದೆ. ಆದ್ದರಿಂದ ಇದು ಆತ್ಮಹತ್ಯೆಯಲ್ಲ. ಯಾರೋ ಕುಕರ್ಮಿಗಳು ಅವನ ಕೈಕಾಲುಗಳನ್ನು ಕತ್ತರಿಸಿ ರೈಲ್ವೆ ಕಂಬಿಯ ಮೇಲೆ ಎಸೆದು ಹೋಗಿದ್ದಾರೆ.

ಪೋಲೀಸರು ಈ ಸಂಬಂಧದಲ್ಲಿ ಅಪರಾಧಿಗಳನ್ನು ಹಿಡಿಯುವುದಕ್ಕೆ ಆಗದೇ ಈ ರೀತಿ ಆತ್ಮಹತ್ಯೆಯ ಪ್ರಕರಣವನ್ನು ಎಂದು ವರದಿಯನ್ನು ತಯಾರು ಮಾಡಿ ನಿಮಗೆ ಕಳಿಸಿಕೊಟ್ಟಿದ್ದಾರೆ. ಇದು ಸತ್ಯಕ್ಕೆ ದೂರವಾಗಿದೆ. ಆದ್ದರಿಂದ ಈ ಪ್ರಕರಣವನ್ನು ತಾವು ಸಿ.ಓ.ಡಿ.ಯವರಿಗೆ ಒಪ್ಪಿಸಿ ಈ ಬಗ್ಗೆ ಸರಿಯಾಗಿ ವಿಚಾರಣೆ ಮಾಡಿಸಬೇಕು ಎಂದು ತಮ್ಮ ಮೂಲಕ ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್. —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮಾಹಿತಿಯನ್ನು ಕೇಳಿದ್ದರಿಂದ ಈ ಬಗ್ಗೆ ನಾನು ಇಡೀ ವರದಿಯನ್ನು ಇಲ್ಲಿ ಓದಿದ್ದೇನೆ. ಮತ್ತೆ ಈಗ ಆ ವಿಷಯವಾಗಿ ಪೂರ್ಣವಾಗಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಅವನ ಹತ್ತಿರ ಒಂದು ನೋಟ್ ಸಿಕ್ಕಿದೆ, ಅದರಲ್ಲಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಅವನು ಹೇಳಿದ್ದಾನೆ. ನಡೆದಿರತಕ್ಕಂಥ ವಿಷಯವನ್ನು ನಾನು ಅವರ ಮುಂದೆ ಇಟ್ಟಿದ್ದೇನೆ. ಈ ವಿಚಾರದಲ್ಲಿ ಪೋಲೀಸರು ಎನ್‌ಕ್ವೈರಿ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ಮಾನ್ಯ ಸದಸ್ಯರು ಈ ಬಗ್ಗೆ ನಮಗೆ ಹೆಚ್ಚಿನ ವಿಷಯಗಳನ್ನು ಕೊಟ್ಟರೆ ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ ಬಿ. ಮಲ್ಲಪ್ಪ.—ಸ್ವಾಮಿ, ಈಗ ಮಾನ್ಯ ಮುಖ್ಯ ಮಂತ್ರಿಯವರು ಅವನ ಹತ್ತಿರ ಒಂದು ನೋಟ್ ಸಿಕ್ಕಿದೆ, ಅದರಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ಹೇಳಿದ್ದಾನೆ ಎಂಬುದಾಗಿ ಹೇಳಿದರು. ಆದರೆ ನಮಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರ ಅವನ ಕೈಕಾಲುಗಳನ್ನು ಕತ್ತರಿಸಿ ಅವನನ್ನು ರೈಲ್ವೆ ಕಂಬಿಯ ಮೇಲೆ ಎಸೆದು ನಂತರ; ಆ ಒಂದು ನೋಟ್ ಬರೆದು ಇಟ್ಟಿದ್ದಾರೆ. ಈ ರೀತಿ ನನಗೆ ಇನ್‌ಫರ್‌ಮೇಷನ್ ಬಂದಿದೆ. ಅವನು ಇನ್ನೂ ಬದುಕಿದ್ದಾನೆ ಚಡ್ಡಿ ಜೇಬಿನಲ್ಲಿ ಅವರೇ ಇಟ್ಟಿದ್ದು ಎಂದು ಪೋಲೀಸರ ಹತ್ತಿರ ಅವನು ಒಪ್ಪಿಕೊಂಡಿದ್ದಾನೆ. ಈ ಬಗ್ಗೆ ಯಾರಾದರೂ ಎಕ್ಸ್‌ಪರ್ಟನ್ನು ಕಳಿಸಿ ಮಾನ್ಯ ಮುಖ್ಯ ಮಂತ್ರಿಯವರು ಎಗ್ಸಾಮಿನ್ ಮಾಡಿಸಲಿ.

ಅಧ್ಯಕ್ಷರು. ನೀವು ಕಾಲಿಂಗ್ ಅಟೆನ್‌ಷನ್‌ನಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಒಂದು ಸ್ಟೇಟ್‌ಮೆಂಟ್ ಸಹ ಕೊಟ್ಟಿದ್ದಾರೆ. ಮತ್ತು ಈ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಇದನ್ನು ಇಲ್ಲಿಗೆ ಸಾಕು ಮಾಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಅವರು ಏನು ಹೇಳುತ್ತಿದ್ದಾರೆ ಎಂದರೆ, ನನಗೆ ಬಂದಿರುವ ವರದಿಯ ಪ್ರಕಾರ ಇದು ಆತ್ಮಹತ್ಯೆಯಲ್ಲ, ಇದು ಕೊಲೆಯ ಪ್ರಯತ್ನವಾಗಿದೆ. ಈ ಸಮಾಚಾರವನ್ನು ನಾನು ಬರವಣಿಗೆಯ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಿಗೆ ತಿಳಿಸುತ್ತೇನೆ, ಅವರು ಅದನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು,—ಮಾನ್ಯ ಮಲ್ಲಪ್ಪನವರೇ, ನೀವು ಸಪರೇಟಾಗಿ ಬಂದು ಅವರ ಜೊತೆಯಲ್ಲಿ ಮಾತನಾಡಿದರೆ ನಿಮ್ಮ ಗುರಿಯನ್ನು ಮುಟ್ಟಬಹುದು. ಮಾನ್ಯ ಭೀಮಣ್ಣ ಖಂಡ್ರೆಯವರೇ, ನಿಮ್ಮದನ್ನು ಆಮೇಲೆ ತೆಗೆದುಕೊಳ್ಳುತ್ತೇನೆ. ಈಗ ಮಾನ್ಯ ಪಿ, ಎನ್. ರೆಡ್ಡಿಯವರು ಮಾತನಾಡಲಿ.

Matter under Rule 312

(i) Shortage of Teachers in upper-lower Schools, Malur.

ಶ್ರೀ ಪಿ. ಎನ್. ರೆಡ್ಡಿ.— ಮಾನ್ಯ ಅಧ್ಯಕ್ಷರೇ, ನಮ್ಮ ತಾಲ್ಲೂಕಿನಲ್ಲಿ ಸುಮಾರು ೨೧ ಸಾವಿರ ಮಕ್ಕಳು ೧ನೇ ತರಗತಿಯಿಂದ ೭ನೇ ತರಗತಿಯವರೆಗೆ ಓದುತ್ತಿದ್ದಾರೆ. ಅಲ್ಲಿಗೆ ಸುಮಾರು ೫೦೦ ಜನ ಉಪಾಧ್ಯಾಯರುಗಳು ಬೇಕಾಗಿದ್ದಾರೆ. ಈಗ ಅಲ್ಲಿ ೪೦೦ಕ್ಕಿಂತ ಕಡಿಮೆ ಉಪಾಧ್ಯಾಯರು ಇದ್ದಾರೆ. ಇದರ ಜೊತೆಗೆ ಈಗ ಹೊಸದಾಗಿ ೧೮ ಶಾಲೆಗಳು ಬೇರೆ ಆಗಿವೆ ಅಲ್ಲಿ ಕೆಲವು ಸ್ಕೂಲುಗಳಲ್ಲಿ ೧ ರಿಂದ ೭ನೇ ತರಗತಿಯವರೆಗೆ ಇಬ್ಬರು ಉಪಾಧ್ಯಾಯರು ಮಾತ್ರ ಪಾಠ ಮಾಡುತ್ತಿದ್ದಾರೆ. ಇನ್ನು ಕೆಲವು ಸ್ಕೂಲುಗಳಲ್ಲಿ ೧ನೇ ತರಗತಿಯಿಂದ ೫ನೇ ತರಗತಿಯವರೆಗೆ ಒಬ್ಬನೇ ಉಪಾಧ್ಯಾಯರು ಪಾಠ ಮಾಡುತ್ತಿದ್ದಾರೆ. ಆ ಸ್ಕೂಲುಗಳು ಹೋದವರ್ಷದಿಂದ ಇದುವರೆಗೆ ಅದೇ ರೀತಿ ನಡೆದುಕೊಂಡು ಬರುತ್ತಿವೆ. ಅಲ್ಲಿ ಇರತಕ್ಕಂಥ ಶಾಲೆಯ ಮಕ್ಕಳು ಚೆನ್ನಾಗಿ ಓದಿ ಮುಂದೆ ಒಳ್ಳೆಯ ಇಂಜಿನಿಯರ್ಸ್, ಡಾಕ್ಟರ್‌ಗಳು ಆಗಬೇಕು ಎನ್ನುವ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಆದ್ದರಿಂದ ಉಪಾಧ್ಯಾಯರುಗಳು ಇಲ್ಲವೇ ಆ ಮಕ್ಕಳು ಏನುತಾನೇ ಓದುವುದಕ್ಕೆ ಆಗುತ್ತದೆ? ಅಲ್ಲಿರತಕ್ಕಂಥ